





ಆಕರ್ಷಣೆ. ಹ್ಯಾಬಿಟಟ್ ಎಂದರೆ ಸಾಗರದ ಸಸ್ಯಗಳ ಹಾಗೂ ಪ್ರಾಣಿಗಳ ನೈಸರ್ಗಿಕ ವಾಸಸ್ಥಳ ಎಂದರ್ಥ. ಇಲ್ಲಿ ವಾಸಸ್ಥಳಗಳ ಮಾದರಿಗಳಿವೆ.

ಒಂದು ಸಣ್ಣ ಟನಲ್‌ನಿಂದ ಶುರುವಾಗಿ ಇನ್ನೊಂದು ಸಣ್ಣ ಟನಲ್‌ನಿಂದ ಕೊನೆಗೊಳ್ಳುವ ಈ ಮತ್ಸ್ಯಾಗಾರ ಕುದುರೆ ಲಾಳದ ಆಕಾರದ ದೊಡ್ಡ ಕೃತಕ ಗುಹಾಮಾರ್ಗ. ಇದರ ಉದ್ದ ಸುಮಾರು ಒಂದು ಕಿ.ಮೀ. ಇದು ಕರಿಮಾತಾ ಕೊಲ್ಲಿ ಹಾಗೂ ಜಾವಾ ಸಮುದ್ರದಿಂದ ಪ್ರಾರಂಭವಾಗಿ ಮಲಕ್ಕಾ ಕೊಲ್ಲಿ ಹಾಗೂ ಲಕ್ಷ ದ್ವೀಪ ಸಮುದ್ರದವರೆಗೆ ನೀರಿನ ಕೆಳಗೆ ಚಾಚಿಕೊಂಡಿದೆ.

ಇವುಗಳಲ್ಲಿ ಆರನೆಯ ಹ್ಯಾಬಿಟಟ್‌ನದ್ದು ಮ್ಯಾಂಗ್ರೋವ್ ಕಾಡುಗಳ ಮಾದರಿ. ಭಾರತದ ಗಂಗಾ ಹಾಗೂ ಸಿಂಧೂ ನದಿಗಳ ಮುಖಜ ಭೂಮಿಗಳಲ್ಲಿ ಬಂಗಾಳಕೊಲ್ಲಿಗೆ ಹೊಂದಿಕೊಂಡು ಇವು ಇವೆ. ಇವುಗಳನ್ನು ಸುಂದರ್ ಬನ್ಸ್ ಎಂದು ಕರೆಯಲಾಗುತ್ತದೆ. ಮಡ್‌ಸ್ಕಿಪರ್ಸ್, ಸ್ಪಾಟೆಡ್ ಸ್ಕ್ಯಾಟ್ಸ್, ಆರ್ಚರ್ ಫಿಷ್ ಹಾಗೂ ಸಿಲ್ವರ್ ಬ್ಯಾಟ್ ಫಿಷ್ ಮುಂತಾದವು ಮ್ಯಾಗ್ರೋವ್ ಕಾಡುಗಳ ಬೇರುಗಳ ಜಾಲವನ್ನು ತಮ್ಮ ವಾಸಸ್ಥಾನವನ್ನಾಗಿ ಮಾಡಿಕೊಂಡಿವೆ. ಮ್ಯಾಂಗ್ರೋವ್ ಕಾಡುಗಳಲ್ಲಿ ಅಪಾಯದ ಅಂಚಿನಲ್ಲಿರುವ ಸಸ್ಯಗಳು ಹಾಗೂ ಪ್ರಾಣಿಗಳು ಹೇರಳವಾಗಿವೆ.

ಮ್ಯಾಂಗ್ರೋವ್ ಕಾಡುಗಳ ಎದುರುಗಡೆ ಅಂದರೆ ನಮಗೆ ಎಡಬದಿಯಲ್ಲಿ ವೃತ್ತಾಕಾರದ ಎರಡು ಸಣ್ಣ ಹ್ಯಾಬಿಟಟ್‌ಗಳಿವೆ. ಇವುಗಳ ಹೆಸರು ಫೋಕಸ್ ಗ್ಲೋಬ್ ಎಂದು. ಈ ವೃತ್ತಗಳಿಗೆ ಅಳವಡಿಸಿದ ರಾವುಗನ್ನಡಿಗಳು ಒಳಗಿನ ಸಣ್ಣ ಜೀವಿಗಳನ್ನು ದೊಡ್ಡದಾಗಿ ತೋರಿಸುತ್ತವೆ. ಒಂದರಲ್ಲಿ ಹವಳ ಸಸ್ಯ ಜೀವಿಗಳು ಸುಂದರವಾಗಿ ಗೋಚರಿಸುತ್ತವೆ.

ಹೊರಗೆ ಹೋಗುವುದಕ್ಕಿಂತ ಸ್ವಲ್ಪ ಮುಂಚೆ ಇರುವುದೇ ಟಚ್‌ಪೂಲ್. ಇಲ್ಲಿರುವ ನಾಬ್ಲಿ ಸೀ ಸ್ಟಾರ್, ಪೆನ್ಸಿಲ್ ಸೀ ಅರ್ಚಿನ್ ಮುಂತಾದ ಮೀನುಗಳನ್ನು ಮುಟ್ಟಬಹುದು, ಕೈಯಲ್ಲಿ ಹಿಡಿಯಬಹುದು. ಇಲ್ಲಿರುವ ಸಿಬ್ಬಂದಿ ಈ ಮೀನುಗಳ ಬಗ್ಗೆ ಎಲ್ಲ ವಿವರಗಳನ್ನೂ ನೀಡುತ್ತಾರೆ. ಸ್ವಲ್ಪ ಮುಂದೆ ಹೋದರೆ ನಾವು ಗಾಜಿನ ನೆಲದ ಮೇಲೆ (ಗ್ಲಾಸ್ ಫ್ಲೋರ್) ನಡೆಯುತ್ತೇವೆ. ನಮ್ಮ ಕಾಲುಗಳ ಅಡಿಯ ಗಾಜಿನ ಕೆಳಗೆ ಹರಿಯುವ ನೀರಿನಲ್ಲಿ ಕೆಲ ಜಲಚರಗಳು ಚಲಿಸುತ್ತಿರುತ್ತವೆ.

ಇಡೀ ಅಕ್ವೇರಿಯಂ ಅನ್ನು ನೋಡಲು 2ರಿಂದ 3 ಗಂಟೆಗಳೇ ಹಿಡಿಯುತ್ತವೆ. ಈ ದೈತ್ಯ ಅಕ್ವೇರಿಯಂನ ಜೀವ ಸಂಕುಲಕ್ಕೆ ದಿನಾಲೂ ಉಣಬಡಿಸಲು ಸಿಬ್ಬಂದಿ ವರ್ಗ 450 ಕೆ.ಜಿ. ಆಹಾರವನ್ನು ತಯಾರು ಮಾಡುತ್ತಾರೆ. 300 ಜನ ಒಂದು ದಿನದಲ್ಲಿ ಮೂರು ಹೊತ್ತೂ ಉಣ್ಣುವಷ್ಟು! ಸಿಬ್ಬಂದಿ ವರ್ಗ ನಿಗದಿಪಡಿಸಿದ ಪೋಷಾಕು ಧರಿಸಿ ಹ್ಯಾಬಿಟಟ್‌ಗಳ ಒಳಗೆ ಪ್ರವೇಶಿಸಿ ಈ ಪ್ರಾಣಿಗಳಿಗೆ ತಮ್ಮ ಕೈಯಿಂದ ಆಹಾರ ತಿನಿಸು–ವುದನ್ನು ನೋಡುವುದೇ ಒಂದು ಸೊಗಸು. ಈ ಫೀಡಿಂಗ್ ಅನ್ನು ವೀಕ್ಷಿಸಲೆಂದೇ ಪ್ರವಾಸಿಗರಿಗೆ ಬೇರೆ ಬೇರೆ ಸಮಯ ನಿಗದಿ ಮಾಡಿದ್ದಾರೆ.

ಅಕ್ವೇರಿಯಂಗಳು ಮಾನವ ನಿರ್ಮಿತ. ಆದರೆ ಸಾಗರಗಳು ನೈಸರ್ಗಿಕ ಅಕ್ವೇರಿಯಂಗಳು. ಅಗಾಧ ಒಡಲಿನಲ್ಲಿ ಕೋಟ್ಯಂತರ ಜಲಚರಗಳು ಮತ್ತು ಸಸ್ಯಗಳಿಗೆ ಆಶ್ರಯ ಕೊಡುವ ಈ ಸಾಗರಗಳ ಬಗ್ಗೆ ಬರೆಯುವುದು ಕಷ್ಟ. ಸಾಗರ ಎಂದರೆ ನೀರಲ್ಲ, ಜಲಚರಗಳ ಕರುಣೆಯ ಹಾಸು. ಇಷ್ಟೊಂದು ಅನಂತ ಸಂಖ್ಯೆಗೆ ಆಹಾರ ಒದಗಿಸುವ ಸಾಗರ ದ್ರವರೂಪದಲ್ಲಿರುವ ಭೂಮಿಯೇ ಸರಿ.